

ದಶಕಗಳ ಜನಪ್ರಿಯ ಹೋಟೆಲ್

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

'ರಂಗಿ (ಗಂಗಿ ಎನ್ನದೆ) ನಿನ್ ಮೇಲ್ ನಂಗೆ ಮನಸೈತೇ, ಕಣ್ತುಂಬ ನಿನ್ ಬೊಂಬೆ ತುಂಬೈತೆ...' ಅಂತ ಚಿತ್ರಗೀತೆ ಹಾಡ್ದ ನೋಡಿ, ರಂಗಿ ರುದ್ರಿಯಾದ್ಲು. ಮೂವತ್ತೈದು ವಯ್ಸಿನ ವಿಧವೆ, ಆಸೆಪಾಸೆಗೆಲ್ಲ ಬೀಗ ಹಾಕಿ, 'ಶಿವ ನೀ ಮಡಗ್ದಂಗ್ ಇರ್ತೀನಿ' ಅಂತಿದ್ದೋಳನ್ನ ಇಂಥ ಅನಾಚಾರದ (ಅವ್ರಿಗೆ) ಹಾಡಲ್ಲಿ ಚುಡಾಯ್ಸದಾ...?

'ಬ್ರಾಂಬ್ರು ಎಸ್ಟ್ ಮರ್ವಾದೆ ಇರಾ ಜನ, ಆದ್ರೆ ನೀ ಯಂತ ಹೊಲ್ಸು. ಥೂ, ನಿನ್ ಬಾಯಿಗಸ್ಬು... ಬ್ರಾಂಬ್ರು ಆಗಿದ್ದಕ್ಕೆ ಬಾಯಲ್ಲೇ ಉಗ್ದೆ, ಇಲ್ಲಾ ಅಂದಿದ್ರೆ, ಇಡ್ದು ಚಚ್ಚಾಕ್ತಿದ್ದೆ...' ಗಂಟೆಪೂರ್ತಿ ಬೈದ್ಲು. ಇದ್ಯಾಕೆ ಹೇಳ್ದೆ ಅಂದ್ರೆ, ಮಲೆನಾಡಿನ್ ಜನ ಎಷ್ಟು ನಯ, ಮುಗ್ಧರೋ ಸಮಯ ಬಂದ್ರೆ ಹಂಗೆ ಚಂಡಿನೂ ಆಗ್ತಾರ್ರೀ. ಅವ್ರಿಗೆ ಈ ಸಂಸ್ಕೃತಿ, ಪರಂಪರೆ, ನಂಬಿಕೆ ಅಷ್ಟು ಮುಖ್ಯ. ಹಾಗಂತ, ಇನ್ನಾರಲ್ಲೂ ಇರಲ್ವಾ ಅಂತೀರಾ? ಇಲ್ಲಾಂತಿಲ್ಲಾ, ನಾನಿಲ್ಲಿ ಕೇವಲ ಮಲೆನಾಡಿನ ರೂಪಗಂಧ ಹೇಳ್ದೆ ಅಷ್ಟೆ...

ನೋಡಿದ್ರಾ ನನ್ನೂರು ನೆನಪಾಗ್ತಿದ್ ಹಾಗೆ ಅಜ್ಜಿ ಬಂದೇಬಿಟ್ಲು, 'ಇಲ್ಲಾಂತಿಲ್ಲಾ' ಅಂತ. ಅದಕ್ಕೆ ಅವ್ಳದ್ದೇ ಏನೋ ಒಂದರ್ಥ. ಕೆಂಪು ಸೀರೆಯ ಅರವತ್ತರ ನನ್ನಜ್ಜಿ ಮಾತು ಶುರುಮಾಡದೇ ಹೀಗೇ. ಹತ್ ಹಡ್ದೋರ ಅಂದ ನೋಡು ಒಂದ್ ಹಡ್ದೋರ ಚಂದ ನೋಡು' ಅಂತ ಒಂದು ಮಾತಿದ್ಯಲ್ಲಾ, ಮನೇಲಿ ಏಳೆಂಟು ಮಕ್ಳು, ಮೂಗೆತ್ತಿನ ತರ ಮನೆಕೆಲ್ಸ, ಆದ್ರೂ, ಹೆಂಗಸ್ರು ಒಂದ್ ಖಾಯಿಲೆಕಸಾಲೆ ಇಲ್ದೆ ಗಟ್‌ಮುಟ್ಟಾಗೇ ಇರ್ತಿದ್ರಪ್ಪ...

'ಅಲ್ವೇ ಸೀತೆ, ತಿಂಡಿ ತಿಂದಿದ್ರೆ ಹಶ್ವಾಗಲ್ವಾ' ನಾವ್ಯಾರಾದ್ರೂ ಮೊಮ್ಮಕ್ಳು ಕೇಳಿದ್ರೆ, 'ಹೋಗತ್ಲಾಗೆ, ಹಶ್ವೂ ಇಲ್ಲಾ, ಪಶ್ವೂ ಇಲ್ಲಾ. ಪಕಾಲಿ ಕಾಪಿ ಕುಡ್ದಿಲ್ವಾ ಎರಡ್ ದಪ. ನಾವ್ ಹಂಗೆಲ್ಲಾ ಪದೆಪದೆ ತಿನ್ನುಕ್ಕಾಗ್ದು' ಅಂತ ತನಗ್ ತಾನೇ ಲಕ್ಷ್ಮಣರೇಖೆ ಏರ್ಕೊಂಡ ಅಜ್ಜಿ ಚೋದ್ಯ ಅಲ್ವೇನ್ರೀ? ಬಿಡಿ, ಆ ಕಾಲದ್ ಪದ್ಧತೀನೇ ಹಿಂಗಿತ್ತು. ಜೊತೆಗೆ, ಮಲೆನಾಡಿನ್ ಆಹಾರನೂ ವಿಶಿಷ್ಟ, ಕಲಬೆರಕೆಯಿಲ್ಲ, ಅಲ್ಲಲ್ಲೇ ಬೆಳೆದ, ಅಲ್ಲಲ್ಲೇ ಸಿಕ್ಕ ಶುದ್ಧ ಪದಾರ್ಥಗಳು, ಅಲ್ಲಿಂದಿಲ್ಲಿಯ ಆಹಾರಸಂಕರ ಇರ್ಲೇ ಇಲ್ವಲ್ಲ...

'ಯಾಕೋ ಬೇದಿ ಆಗ್ತಿದೆ ಕಣೇ ಕಮ್ಲೂ, ಹಿತ್ಲಲ್ಲಿ ಚೇನೀಕುಡಿ (ಸೀಗುಂಬಳದ ಹೂ) ಇದ್ರೆ ತಾಂಬಾ, ಒಂದ್ ಹಶ್ವಾಳೆ (ತಂಬುಳಿ) ಮಾಡ್ಕತೀನಿ... ಏ ಶಿವ್ರೂ, ಒಂದ್ ಕಂಚೀಕಾಯ್ ಕಿತ್ಕೊಡೋ. ಪಿತ್ತ ಜಾಸ್ತಿ ಆಗಿದೆ, ಒಂದಷ್ಟು ತಲೆಗ್ ಮೆತ್ಕಂಡ್ ನೀರ್ ಹಾಕ್ಕತೀನಿ ಹಂಗೆ ಅಕ್ಕಚ್ಚಿನ್ (ಅಕ್ಕಿ ತೊಳೆದ ನೀರು) ಪಾನ್ಕ ಮಾಡ್ತನಿ, ನೀವೂ ಕುಡೀರಿ, ಶಕ್ತಿ ಬರುತ್ತೆ ಆ ದೊಡ್‌ಪತ್ರೆ ಕಿತ್ಕ ಬಾ, ಮೆಣ್ಸುಜೀರ್ಗೆ ಅರ್ದು ಹಶ್ವಾಳೆ ಮಾಡ್ತನಿ, ನಿನ್ ಮೈ ಮೇಲಿನ್ ಪಿತ್ಗಂಧೆ ಎಲ್ಲ ಓಡೋಗತ್ತೆ' ಹೀಗೆ ಎಷ್ಟು ಮನೆಮದ್ದಲ್ಲಿ ಅನಾರೋಗ್ಯನ ಒದ್ದು ಓಡುಸ್ತಿದ್ಲಪ್ಪ ಈ ಅಜ್ಜಿ. ಒಂದೊಂದಪ 'ಇದ್ದಲ್ಲೇ ಹುಲ್ಲು ಮೇಯೋದೇ ಚೆನ್ನಾಗಿತ್ತೇನೋ' ಎಂದೂ ಆವಾಗಾವಾಗ ಅನ್ಸಕ್ಕೆ ಶುರುವಾಗತ್ತೆ.

ಅರೇ, ಈ ನನ್ನೂರು ನರಸಿಂಹರಾಜಪುರ ಎಲ್ಲಿದೆ ಏನ್ಕಥೆ ಹೇಳಿಲ್ಲ ಅಲ್ವಾ? ನನ್ನೂರಿಗೆ ನೂರು ವರ್ಷದ ಇತಿಹಾಸ ಇದೇರಿ. ಚಿಕ್ಕಮಗಳೂರು ಜಿಲ್ಲೆಯ ಈ ತಾಲ್ಲೂಕು ಕೇಂದ್ರ ಭದ್ರಾನದಿ ಮುಳುಗಡೆಯ ಹಿನ್ನೀರಿನಿಂದ ಆವೃತವಾಗಿದೆ. ಸುತ್ತಲಿದ್ದ ಅನೇಕ ಚಿಕ್ಕಪುಟ್ಟ ಗ್ರಾಮಗಳ ಮುಳುಗ್ಸಿ ಮುಳ್ಗಡೆಯಾಗ್ದಿದ್ರೆ ಅವೆಲ್ಲ ಸೇರಿ ದೊಡ್ಡ ಪಟ್ಟಣನೇ ಆಗ್ತಿತ್ತೇನೋ? ಊರು ಪ್ರವೇಶದಲ್ಲೇ ಹಿನ್ನೀರ ಹರಿವು, ಸೇತುವೆ ಇದೆ. ಊರು ಹಾದು ಮುಂದೆ ಹೋದ್ರೆ ಈ ಹಿನ್ನೀರ ಕಾರಣ ಬೇರೆಯಾದ ಭವಾನಿಶಂಕರನ


ನರಸಿಂಹರಾಜಪುರ ತಾಲ್ಲೂಕಿನ
ನಾಗಲಾಪುರ ಗ್ರಾಮದ ಹೆಗ್ಗರಿಕೆರೆ